**OS.No.193/2016**
**PW-1**

ದಿನಾಂಕ 04-12-2021 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀ ಸವಾಲುಃ 2 ನೇ ಪ್ರತಿವಾದಿಗಳ ಪರ ಶ್ರೀ ಎಫ್ ಬಿ ಎಂ ವಕೀಲರಿಂದಃ</u>**

1. ದಾವಾ ಆಸ್ತಿಗೆ ಹೊಂದಿ ಪಶ್ಚಿಮ ದಿಕ್ಕಿಗೆ ನನ್ನ ಮನೆ ಇದೆ. ದಾವಾ ಆಸ್ತಿಗೆ ಹೊಂದಿ ಪಶ್ಚಿಮ ದಿಕ್ಕೆಗೆ ಧರ್ಮಾ ಜಲಾಶಯದ ಕಾಲುವೆ ಇದೆ ಎಂದರೆ ಸರಿ. ಸದರಿ ಜಲಾಶಯದ ನೀರು ಹಲವಾರು ಗ್ರಾಮಗಳಲ್ಲಿರುವ ಕೆರೆಗಳಿಗೆ ತುಂಬುತ್ತವೆ ಎಂದರೆ ಸರಿ. ಸದರಿ ಕಾಲುವೆ ಸುಮಾರು 10 ಅಡಿಗಳ ಅಗಲ ಇದೆ ಎಂದರೆ ಸರಿ. ದಾವಾ ಆಸ್ತಿಯ ಉತ್ತರಕ್ಕೆ ಪ್ರಕಾಶ ಸೆಟ್ಟಪ್ಪನವರ ಆಸ್ತಿ ಇದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಉತ್ತರಕ್ಕೆ ಮೊದಲು ಪಂಚಾಯಿತಿ ರಸ್ತೆ ಹೋಗಿದ್ದು ಅದರ ಉತ್ತರ ದಿಕ್ಕಿಗೆ ಹೊಂದಿ ಪ್ರಕಾಶ ಸೆಟ್ಟಪ್ಪನವರ ಜಮೀನು ಇದೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯ ಉತ್ತರ ದಿಕ್ಕಿಗೆ ಪಂಚಾಯಿತಿ ರಸ್ತೆ ಇದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸಾಕ್ಷಿ ಪಂಚಾಯಿತಿಗೆ ಸೇರಿದ ಕಾಲುದಾರಿ ಇದೆ ಎಂದು ನುಡಿಯುತ್ತಾರೆ. ಆ ರೀತಿಯ ಕಾಲು ದಾರಿ ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯ ದಕ್ಷಿಣಕ್ಕೆ ದೇಸಾಯಿ ಅವರಿಗೆ ಸೇರಿದ ಆಸ್ತಿ ಇದೆ ಎಂದರೆ ಸರಿ. ಮತ್ತು ಪೂರ್ವ ದಿಕ್ಕಿಗೆ ಸಾರ್ವಜನಿಕ ಹೊಂಡ ಇದೆ ಎಂದರೆ ಸರಿ.

2. ದಾವೆಯನ್ನು ಸಲ್ಲಿಸುವ ಕಾಲಕ್ಕೆ ದಾವಾ ಆಸ್ತಿಯ ಮಾರುಕಟ್ಟೆಯ ಮೌಲ್ಯ ರೂ.3 ರಿಂದ 3.5 ಲಕ್ಷ್ಯ ಇರಬಹುದು ಎಂದರೆ ಸಾಕ್ಷಿ ಇರಬಹುದು ಎಂದು ನುಡಿಯುತ್ತಾರೆ.

3. ಕಲ್ಲಾಪೂರದಲ್ಲಿರುವ ದೇಸಾಯಿ ಎಂಬ ಕುಟುಂಬವು ಶ್ರೀಮಂತ ಕುಟುಂಬ ಮತ್ತು ಸದರಿ ಕುಟುಂಬಕ್ಕೆ ಸಾಕಷ್ಟು ಜಮೀನುಗಳು ಇವೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಕಲ್ಲಾಪೂರದಲ್ಲಿ ದೇಸಾಯಿ ಎಂಬ ಎರಡು ಪ್ರತ್ಯೇಕ ಕುಟುಂಬಗಳು ಇವೆ ಎಂದು ನುಡಿಯುತ್ತಾರೆ. ಕಲ್ಲಾಪೂರ ಗ್ರಾಮದಲ್ಲಿ ಗಂಗಾಮತಸ್ಥರ ಜನಗಳು

ಸಾಕಷ್ಟು ಇದ್ದಾರೆ ಎಂದರೆ ಸರಿ. ಸದರಿ ಗಂಗಾಮತಸ್ಥರ ಜನಗಳು ದೇಸಾಯಿ ಕುಟುಂಬದಲ್ಲಿ ಇದ್ದ ಶಾಸಕರ ಅನುಯಾಯಿಗಳು ಎಂದರೆ ಸರಿ.

4. 1972-73 ರಿಂದಲೂ ನಮ್ಮ ಹಿರಿಯರ ಕಾಲದಿಂದಲೂ ಸಹ ದಾವಾ ಆಸ್ತಿಯ ಸ್ವಾಧೀನದಲ್ಲಿ ಇದ್ದೇವೆ. 1972-73 ರ ಪೂರ್ವದಲ್ಲಿ ದಾವಾ ಆಸ್ತಿಯನ್ನು ನನ್ನ ತಂದೆ ಮಾಲೀಕರು ಇದ್ದು, ಅವರು ಮರಣ ಹೊಂದಿದ ನಂತರ ನಾನು ಮಾಲೀಕನಾಗಿರುತ್ತೇನೆ. ದೇಸಾಯಿ ಅವರು ನೀಡಿದ ಪರವಾನಿಗೆಯ ಆಧಾರದ ಮೇಲೆ ನಾವು ದಾವಾ ಆಸ್ತಿಯ ಸ್ವಾಧೀನಕ್ಕೆ ಬಂದಿರುತ್ತೇವೆ. ಸ್ವಾಧೀನಕ್ಕೆ ಸಂಬಂಧಿಸಿದಂತೆ ಲಿಖಿತ ಪರವಾನಿಗೆ ಆಗಿರುವುದಿಲ್ಲ. ದಾವಾ ಆಸ್ತಿಯ ಪೂರ್ವ ಮಾಲೀಕರು ಗುರುರಾವ್ ರಾಘವೇಂದ್ರರಾವ್ ದೇಸಾಯಿ ಎಂದರೆ ಸರಿ. 1 ನೇ ಪ್ರತಿವಾದಿಯು ಗುರುರಾವ್ ರವರ ಪತ್ನಿ ಎಂದರೆ ಸರಿ. ಗ್ರಾಮದಲ್ಲಿರುವ ಖಾಸಗಿ ಆಸ್ತಿಗಳಿಗೆ ಸಂಬಂಧಿಸಿದಂತೆ ಅವುಗಳ ಮಾಲೀಕರು ಮತ್ತು ಬೊಗಟೆದಾರರು ಯಾರು ಎಂದು ಸಂಬಂಧಪಟ್ಟ ಪಂಚಾಯಿತಿ ದಾಖಲೆಗಳಲ್ಲಿ ನಮೂದು ಇರುತ್ತವೆ ಎಂದರೆ ಸರಿ. ದಾವಾ ಆಸ್ತಿಗೆ ಸಂಬಂಧಿಸಿದಂತೆ ಪಂಚಾಯಿತಿ ಉತಾರ / ಕರಾಕರಣೆ ಯಾದಿಯನ್ನು ಹಾಜರು ಪಡಿಸಿದ್ದೇನೆ.

5. ನನಗೆ ಕನ್ನಡ ಭಾಷೆಯನ್ನು ಓದಲು ಬರುತ್ತದೆ. ನಿಪಿ-1 ರ ಕರಾಕರಣೆಯಾದಿಯಲ್ಲಿ ಮಾಲೀಕರ ಕಾಲಂನಲ್ಲಿ ಗುರುರಾಘವೇಂದ್ರರಾವ್ ದೇಸಾಯಿ ಎಂದು ನಮೂದು ಇದ್ದು, ಅವರು ಮರಣ ಹೊಂದಿದ ನಂತರ ಅವರ ಹೆಸರನ್ನು ಕಡಿಮೆ ಮಾಡಿ 1 ನೇ ಪ್ರತಿವಾದಿಯ ಹೆಸರನ್ನು ಮಾಲೀಕರೆಂದು ನಮೂದಿಸಿರುತ್ತಾರೆ ಎಂದರೆ ಸರಿ. ಅದಲ್ಲದೇ ನಿಪಿ-1 ರ ಬಗವಟೆದಾರರ ಕಾಲಂನಲ್ಲಿ ಸ್ವಂತ ಎಂದು ನಮೂದು ಇದೆ ಎಂದರೆ ಸರಿ. ಸಾಕ್ಷಿಗೆ ಗ್ರಾಮ ಪಂಚಾಯಿತಿಯ ಕರಾಕರಣೆ ಯಾದಿಯನ್ನು ತೋರಿಸಿ ಸದರಿ ದಾಖಲೆಯು 1965 -66 ರಿಂದ 2015 -16 ರ ಇಸವಿಯವರೆಗೂ ಇದ್ದು, ಅದರ ಮಾಲೀಕರ ಕಾಲಂನಲ್ಲಿ ಗುರು ರಾಘವೇಂದ್ರರಾವ್ ದೇಸಾಯಿ ಎಂದು ನಮೂದು ಇದೆ ಎಂದರೆ ಸರಿ. ಅದೇ ರೀತಿ ಬಗವಟೆದಾರರ ಕಾಲಂನಲ್ಲಿ ಖುದ್ದು

ಎಂದು ನಮೂದು ಇದೆ ಎಂದರೆ ಸರಿ. ಸದರಿ ದಾಖಲೆಯನ್ನು ಸಾಕ್ಷಿಯು ಒಪ್ಪಿಕೊಂಡಿದ್ದರಿಂದ ಅದನ್ನು ನಿಡಿ-1 ಎಂದು ಗುರುತಿಸಲಾಯಿತು. ದಾವಾ ಆಸ್ತಿಗೆ ಸಂಬಂಧಿಸಿದಂತೆ ನಾನು ಕೇವಲ 2015-16 ರ ವರ್ಷದ ಕರಾಕರಣೆಯಾದಿಯನ್ನು ಹಾಜರು ಪಡಿಸಿದ್ದು, ಹಿಂದಿನ ವರ್ಷಗಳ ಕರಾಕರಣೆಯಾದಿಗಳನ್ನು ಹಾಜರು ಪಡಿಸಲು ನನಗೆ ತೊಂದರೆ ಇರಲಿಲ್ಲ. ದಾವಾ ಆಸ್ತಿಗೆ ಸಂಬಂಧಿಸಿದಂತೆ ನಾನು ಕಂದಾಯ/ ಕರವನ್ನು ಕಟ್ಟಿರುತ್ತೇನೆ. ಸಾಕ್ಷಿಗೆ 2 ನೇ ಪ್ರತಿವಾದಿಯ ಪರ ವಕೀಲರು ಮತ್ತೊಂದು ಕರ ಆಕರಣೆಯ ಯಾದಿಯನ್ನು ತೋರಿಸಿ ಅದು 2016 ಮತ್ತು 2017 ರ ವರ್ಷಕ್ಕೆ ಸಂಬಂಧಿಸಿದ್ದು, ಅದರಲ್ಲಿಯೂ ಸಹ 1 ನೇ ಪ್ರತಿವಾದಿಯ ಹೆಸರು ಮಾಲೀಕರರ ಕಾಲಂನಲ್ಲಿ ಮತ್ತು ಬಗವಟೆದಾರರ ಕಾಲಂನಲ್ಲಿ ಸ್ವಂತ ಎಂದು ನಮೂದು ಇರುತ್ತದೆ ಎಂದು ಸರಿ ಎಂದು ಒಪ್ಪಿಕೊಂಡಿದ್ದರಿಂದ, ಒಪ್ಪಿಕೊಂಡ ಸದರಿ ದಾಖಲೆಯನ್ನು ನಿಡಿ-2 ಎಂದು ಗುರುತಿಸಲಾಯಿತು.

6. ಗ್ರಾಮ ಪಂಚಾಯಿತಿ ಅವರು ನೀಡುವ ಇ-ಸ್ವತ್ತಿನ ಖಾತೆಗಳ ಬಗ್ಗೆ ನನಗೆ ಮಾಹಿತಿ ಇದೆ. ಇ ಸ್ವತ್ತಿನ ಖಾತೆಯನ್ನು ನೀಡುವ ಪೂರ್ವದಲ್ಲಿ ಸಂಬಂಧಪಟ್ಟ ಗ್ರಾಮ ಪಂಚಾಯಿತಿ ಅಧಿಕಾರಿಗಳು ಸಂಬಂಧಪಟ್ಟ ಆಸ್ತಿಗೆ ಖುದ್ದಾಗಿ ಭೇಟಿ ನೀಡಿ ಅದರ ವಸ್ತುಸ್ಥಿತಿಯನ್ನು ಪರಿಶೀಲಿಸಿ ಚೆಕ್ಕಬಂದಿಯನ್ನು ಪರಿಶೀಲಿಸಿ ಮತ್ತು ಛಾಯಾಚಿತ್ರವನ್ನು ತೆಗೆದು ಅದರಂತೆ ಖಾತೆಯನ್ನು ತಯಾರಿಸುತ್ತಾರೆ ಎಂದರೆ ಸರಿ. ಗುರುರಾವ್ ದೇಸಾಯಿ ಮತ್ತು 1 ನೇ ಪ್ರತಿವಾದಿಯು ಯಾವುದೇ ಕಾಲದಲ್ಲೂ ದಾವಾ ಆಸ್ತಿಯನ್ನು ನನಗಾಗಲೀ ಅಥವಾ ನನ್ನ ತಂದೆಗೆ ಆಗಲೀ ಪರವಾನಿಗೆ ಆಧಾರದ ಮೇಲೆ ನೀಡಿಲ್ಲ ಎಂದರೆ ಸರಿಯಲ್ಲ.

7. ಶ್ರೀ ಮನೋಜ ಶ್ರೀನಿವಾಸ ದೇಸಾಯಿ ಅವರು ಕಲ್ಲಾಪೂರ ಗ್ರಾಮ ಮತ್ತು ತಾಲೂಕಿನಲ್ಲಿ ಘನ್ಯ ವ್ಯಕ್ತಿ ಎಂದರೆ ಸರಿ. ಮನೋಜ ದೇಸಾಯಿ ಅವರು 1 ನೇ ಪ್ರತಿವಾದಿಗೆ ಸಂಬಂಧಿಕರು ಎಂದರೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿ ಈಗ ಓಡಾಡಲು ಆಗುವುದಿಲ್ಲ ಎಂದರೆ ಸಾಕ್ಷಿಯು ಆಕೆಯು ಗ್ರಾಮದಲ್ಲಿ ಇಲ್ಲದಿರುವುದರಿಂದ

ಅದರ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ದಾವಾ ಆಸ್ತಿಯನ್ನು ಹೊರತುಪಡಿಸಿ 1 ನೇ ಪ್ರತಿವಾದಿಗೆ ಕಲ್ಲಾಪೂರ ಗ್ರಾಮದಲ್ಲಿ ಇತರ ಆಸ್ತಿಗಳು ಇವೆ ಎಂದರೆ ಸರಿ. 1 ನೇ ಪ್ರತಿವಾದಿಗೆ ಸೇರಿದ ಆಸ್ತಿಗಳು ಇರುವುದರಿಂದ ಅವರು ಈಗಲೂ ಸಹ ಕಲ್ಲಾಪೂರದಲ್ಲಿ ವಾಸ ಮಾಡುತ್ತಿದ್ದು ಆದರೆ ನಾನು ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

8. ಕಲ್ಲಾಪೂರ ಗ್ರಾಮದಲ್ಲಿ ಗಂಗಾಮತಸ್ಥರು ಜನರು ಹೆಚ್ಚಿಗೆ ಇರವುದರಿಂದ ಅವರ ಜನಾಂಗಕ್ಕೆ ಸೇರಿದ ಒಂದು ಗಂಗಾಪರಮೇಶ್ವರಿ ವಿವಿದ್ದೋದ್ದೇಶ ಸಮಿತಿಯನ್ನು ರಚಿಸಿಕೊಂಡಿದ್ದಾರೆ ಎಂದರೆ ಸರಿ. ಸದರಿ ಸಮಿತಿಗೆ 2 ನೇ ಪ್ರತಿವಾದಿಯನ್ನು ಪ್ರತಿನಿಧಿಸಿರುವ ಶಿವಾನಂದವರೇ ಅಧ್ಯಕ್ಷರು ಇರುತ್ತಾರೆ ಎಂದರೆ ಸರಿ. ಸದರಿ ಜನಾಂಗಕ್ಕೆ ಸಂಬಂಧಿಸಿದಂತೆ ದೇವಸ್ಥಾನ ಮತ್ತು ಸಭಾಭವನವನ್ನು ನಿರ್ಮಿಸಲು ಕಲ್ಲಾಪೂರ ಗ್ರಾಮದಲ್ಲಿ ದೇಣಿಗೆಯನ್ನು ತೆಗೆದುಕೊಂಡಿರುವ ಬಗ್ಗೆ ನನಗೆ ಮಾಹಿತಿ ಇಲ್ಲ.

9. ದಾವಾದ ಆಸ್ತಿಯಲ್ಲಿ ಯಾವುದೇ ಕಟ್ಟಡವನ್ನು ನಿರ್ಮಿಸಿರುವುದಿಲ್ಲ. 2016 ನೇ ಇಸವಿಯಿಂದಲೇ ಗಂಗಾಮತಸ್ಥಕ್ಕೆ ಸೇರಿದ ಸಮಿತಿಯು ದಾವಾ ಆಸ್ತಿಯಲ್ಲಿ ದೇವಸ್ಥಾನ ಮತ್ತು ಸಭಾಂಗಣವನ್ನು ನಿರ್ಮಿಸುತ್ತಿದ್ದಾರೆ ಎಂದರೆ ಸರಿಯಲ್ಲ. ಸದರಿ ನಿರ್ಮಾಣಕ್ಕೆ ಸರ್ಕಾರದವರು ಹಣವನ್ನು ಮಂಜೂರು ಮಾಡಿರುವ ಬಗ್ಗೆ ನನಗೆ ಗೊತ್ತಿಲ್ಲ. ಗುರುರಾವ್ ದೇಸಾಯಿ ಅವರು ಮರಣ ಹೊಂದಿದ ನಂತರ ಅವರ ಹೆಂಡತಿ 1 ನೇ ಪ್ರತಿವಾದಿ ಗಂಗಾಮತಸ್ಥರ ಜನರ ಒಳತಿಗಾಗಿ ದಾವಾ ಆಸ್ತಿಯನ್ನು ದಾನ ಮಾಡಿರುತ್ತಾರೆ ಎಂದರೆ ಸರಿ. ಸದರಿ ದಾನದ ಬಗ್ಗೆ ನಾನೇ ನಿಪಿ-8 ರಂತೆ ದಾನಪತ್ರವನ್ನು ಹಾಜರು ಪಡಿಸಿದ್ದೇನೆ ಎಂದರೆ ಸರಿ.

10. ಈ ದಾವೆಯನ್ನು ದಾವಾ ಆಸ್ತಿಗೆ ನಾನೇ ಮಾಲೀಕನೆಂದು ಘೋಷಿಸಲು ಸಲ್ಲಿಸಿದ್ದೇನೆ. ಈ ದಾವೆಯನ್ನು ಕೇವಲ ಶಾಶ್ವತ ನಿರ್ಭಂದಕಾಜ್ಞೆಯನ್ನು ಕೋರಿ

ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು 1 ನೇ ಪ್ರತಿವಾದಿಯು ಬರೆದು ಕೊಟ್ಟಿರುವ ದಾನ ಪತ್ರವನ್ನು ರದ್ದು ಮಾಡುವಂತೆ ಕೋರಿ ಸಲ್ಲಿಸಿಲ್ಲ ಎಂದರೆ ಸಾಕ್ಷಿ ಅದರ ಬಗ್ಗೆ ನನ್ನ ವಕೀಲರಿಗೆ ತಿಳಿದಿರುತ್ತದೆ ಎಂದು ನುಡಿಯುತ್ತಾರೆ. ದಾನ ಪತ್ರವನ್ನು ರದ್ದು ಮಾಡುವಂತೆ ಕೋರಿ ದಾವೆಯನ್ನು ಸಲ್ಲಿಸಲು ತೊಂದರೆ ಇತ್ತಾ ಎಂಬ ಸೂಚನೆಗೆ ಸಾಕ್ಷಿ ಅದೇ ಕಾರಣಕ್ಕೆ ಸಲ್ಲಿಸಿದ್ದೇನೆ ಎಂದು ನುಡಿಯುತ್ತಾರೆ. ನಿಪಿ-8 ರ ದಾನ ಪತ್ರವು ದಿಃ 14-06-2016 ರಂದು ಗಂಗಾಪರಮೇಶ್ವರಿ 2 ನೇ ಪ್ರತಿವಾದಿಯ ಪರವಾಗಿ ನೊಂದಾಯಿತಿವಾಗಿರುತ್ತದೆ ಎಂದರೆ ಸರಿ. ನಿಪಿ-8 ರ ದಾನ ಪತ್ರವನ್ನು ನೊಂದಾಯಿಸಿದ ದಿನಾಂಕವೇ ದಾವಾ ಆಸ್ತಿಯು 1 ನೇ ಪ್ರತಿವಾದಿಯು 2 ನೇ ಪ್ರತಿವಾದಿಯ ಸಮಿತಿಗೆ ಬಿಟ್ಟುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಯ ಸಮಿತಿಯು ದಾನ ಪತ್ರವಾದ ದಿನಾಂಕದಿಂದಲೂ ದಾವಾ ಆಸ್ತಿಯ ಸ್ವಾಧೀನದಲ್ಲಿ ಇದೆ ಎಂದರೆ ಸರಿಯಲ್ಲ. ನಾನಾಗಲೀ ನನ್ನ ಹಿರಿಯರಾಗಲಿ ಎಂದಿಗೂ ದಾವಾ ಆಸ್ತಿಯ ಸ್ವಾಧೀನದಲ್ಲಿ ಇಲ್ಲಾ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಮೇಲೆ ನನಗೆ ಕಾನೂನು ಬದ್ದ ಹಕ್ಕು ಮತ್ತು ಹಿತಾಸಕ್ತಿಗಳು ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಈಗಾಗಲೇ ಸಭಾಂಗಣವು ಮೇಲ್ಛಾವಣಿ ಹಂತಕ್ಕೆ ಬಂದಿದೆ ಎಂದರೆ ಸರಿಯಲ್ಲ. ನಾನು ಹಾಜರು ಮಾಡಿರುವ ನಿಪಿ-2 ರಿಂದ ನಿಪಿ-7 ರ ಛಾಯಾಚಿತ್ರಗಳು ದಾವಾ ಆಸ್ತಿಗಳಿಗೆ ಸಂಬಂಧಪಟ್ಟ ಛಾಯಾಚಿತ್ರಗಳು ಅಲ್ಲ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಯ ಸಮಿತಿಯು ದಾವಾ ಆಸ್ತಿಗೆ ದಿಃ 14-06-2016 ರ ನೊಂದಾಯಿತ ದಾನ ಪತ್ರದ ಮುಖಾಂತರ ಮಾಲೀಕರು ಎಂದರೆ ಸಾಕ್ಷಿಯು ನಾನೇ ದಾವಾ ಆಸ್ತಿಯ ಸ್ವಾಧೀನದಲ್ಲಿ ಇದ್ದೇನೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯ ಮೇಲೆ ನನಗೆ ಹಕ್ಕು ಮತ್ತು ಹಿತಾಸಕ್ತಿ ಇಲ್ಲದೇ ಇದ್ದರೂ ಸಹ ಸುಳ್ಳು ಸಂಗತಿಗಳ ಆಧಾರದ ಮೇಲೆ ಈ ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ದಕ್ಷಿಣ ಭಾಗದಲ್ಲಿ 1 ನೇ ಪ್ರತಿವಾದಿಗೆ ಸೇರಿದ ಆಸ್ತಿ ಇರುತ್ತದೆ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**OS.No.193/2016**
**PW-1**

<u>**ಪಾಟೀ ಸವಾಲುಃ 1 ನೇ ಪ್ರತಿವಾದಿ ಪರ ಶ್ರೀ ಡಿ ಎನ್ ಕೆ ವಕೀಲರಿಂದಃ**</u>

2 ನೇ ಪ್ರತಿವಾದಿ ಪರ ವಕೀಲರು ಮಾಡಿದ ಪಾಟೀ ಸವಾಲನ್ನು ಅನುಮೊದಿಸಿಕೊಂಡಿರುತ್ತಾರೆ.

**ಮರುವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ ಸರಿ ಇದೆ ಎಂದು
ಒಪ್ಪಿರುತ್ತಾರೆ.

ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ
ಹಾನಗಲ್

ಸಾಕ್ಷಿದಾರರ ಸಹಿ